# ಕಸ್ತೂರ್‌ಬಾ v/s ಗಾಂಧಿ

■ ಬರಗೂರು ರಾಮಚಂದ್ರಪ್ಪ
ಕಲೆ: ಮನೋಹರ ಕೆ. ಆಚಾರ್ಯ



## ಸಾರ್ವಜನಿಕ ಜೀವನದ ಅಗ್ನಿದಿವ್ಯ

ಗಾಂಧಿಯವರ ಹೋರಾಟ ಮತ್ತು ಸುಧಾರಣಾ ಕ್ರಿಯೆಗಳ ಕಾರಣದಿಂದ ಅಲ್ಲಿನ ಚಂಪಾರಣದ ಜನರು 'ಬಾಪು' ಅಂತ ಕರೆಯೋದಕ್ಕೆ ಆರಂಭಿಸಿದರು. ಚಂಪಾರಣದಲ್ಲೇ ಗಾಂಧೀಜಿ 'ಬಾಪು' ಆಗಿದ್ದು; ಮುಂದೆ ಅದೇ ರೂಢಿಗೆ ಬಂತು. ಎಲ್ಲವೂ ಕಸ್ತೂರ್‌ಬಾರ ನೆನಪಿನಾಳದಲ್ಲಿ ಮರುಕಳಿಸಿತ್ತು.

ನೆನಪಿನಾಳದಲ್ಲಿದ್ದ ಕಸ್ತೂರ್‌ಬಾರನ್ನು ಗಾಂಧಿ ಮತ್ತೆ ಹೊರತಂದರು. ಕಸ್ತೂರ್, ಎಷ್ಟು ಹೊತ್ತಾಯ್ತು, ಸುಮ್ನೆ ಇದ್ದೀಯಲ್ಲ? ಏನಾದ್ರೂ ಮಾತಾಡು.'

'ಮಾತಾಡಿದ್ರೆ ಮೌನವಾಗು ಅಂತೀರಿ. ಮೌನವಾಗಿದ್ರೆ ಮಾತಾಡು ಅಂತೀರಿ' ಎಂದು ಕಸ್ತೂರ್‌ಬಾ ಛೇಡಿಸಿದರು.

'ಅದು ಹಾಗೇ ಕಸ್ತೂರ್, ಮಾತು–ಮೌನ ಅನ್ನೋದು, ನಾನು–ನೀನು ಇದ್ದ ಹಾಗೆ. ಹೊರನೋಟಕ್ಕೆ ಎದುರು ಬದುರಾಗಿರೊ ಹಾಗೆ ಕಂಡ್ರೂ ಒಳನೋಟದಲ್ಲಿ ಬೇರೆ ಆಯಾಮವೇ ಇರುತ್ತೆ. ಮಾತಿನ ಹಿಂದೆ ಮೌನ, ಮೌನದ ಹಿಂದೆ ಮಾತು! ಮಾತಿನೊಳಗೆ ಮೌನ, ಮೌನದೊಳಗೆ ಮಾತು!'

'ಅದೆಲ್ಲ ದೊಡ್ಡ ದೊಡ್ಡ ಮಾತು ಬಾಪು. ನಾನು ಈ ದೇಶಕ್ಕೆ ಬಂದಾಗ್ನಿಂದ ಏನೇನಾಯ್ತು ಅಂತ ಹಾಗೇ ಮೆಲುಕು ಹಾಕ್ತಾ ಇದ್ದೆ. ನಿಮ್ಮ ಮೊದಲ್ನೇ ಹೋರಾಟ ಚಂಪಾರಣ ಸತ್ಯಾಗ್ರಹ ನೆನಪಾಗಿ ಅದರಲ್ಲೇ ಮುಳುಗಿಬಿಟ್ಟಿದ್ದೆ.'

'ಅದ್ರಲ್ಲಿ ನಿನ್ನ ಪಾತ್ರವೂ ದೊಡ್ಡದು ಕಸ್ತೂರ್. ಆನಂತರ ಸ್ವದೇಶಿ ಚಳವಳಿಗೂ ನೀನು ಬೆಂಬಲವಾಗಿ ನಿಂತೆ. ಸ್ವದೇಶಿ ಸ್ವಾವಲಂಬಿ ಭಾರತ ಬೇಕು ಅಂತ ಕನಸು ಕಂಡೋರಲ್ವ ನೀವು.'

ಗಾಂಧಿ ಮತ್ತೆ ಅದೇ ಕನಸಿನ ಲೋಕಕ್ಕೆ ಹೋದರು.

ಈಗ ಕಸ್ತೂರ್‌ಬಾ ಗಾಂಧಿಯವರ ಲೋಕಕ್ಕೆ ಹೋದರು.

ಭಾವ ಬಂಧವು ಬೆಸೆದ ರೀತಿ
ಮುಖಾಮುಖಿಯಿಲ್ಲದ ಮನಸ್ಥಿತಿ
ಹಾಯಿದೋಣಿಯ ಪಯಣ
ಸಬರಮತಿಯ ನಿಲ್ದಾಣ.

* * *

ಅದು ಸಬರಮತಿ ಆಶ್ರಮ. ಆಶ್ರಮವಾಸಿಗಳೂ ಇತರರೂ ಗುಂಪಾಗಿ ಸೇರಿದ್ದರು. ಕಸ್ತೂರ್‌ಬಾ, ದೇವದಾಸ್, ಮಹದೇವ ದೇಸಾಯಿ, ಮಗನಲಾಲ್ ಕೂಡ ಇದ್ದರು. ಗಾಂಧಿ ಪುಟ್ಟ ಭಾಷಣ ಆರಂಭಿಸಿದರು:

'ನೋಡಿ, ನಾವು ಬ್ರಿಟಿಷರ ವಿರುದ್ಧದ ಹೋರಾಟಾನ ಬೇರೆ ಆಯಾಮದಲ್ಲೂ ನಡೆಸಬೇಕು. ವಿದೇಶಿ ಉಡುಪಿಗೆ ಬಹಿಷ್ಕಾರ ಹಾಕ್‌ಬೇಕು. ಸ್ವದೇಶಿ ಉಡುಪು ಧರಿಸ್‌ಬೇಕು. ವಿದೇಶಿ ಉಡುಪುಗಳನ್ನ ಬಹಿರಂಗವಾಗಿ ಸುಟ್ಟು ಚಳವಳೀನ ತೀವ್ರಗೊಳಿಸ್ಬೇಕು. ಇನ್‌ಮೇಲೆ ನಾವೆಲ್ಲ ಖಾದಿ ಬಟ್ಟೆ ಉಡಬೇಕು' ಎಂದು ಹೇಳಿ, ಮಹದೇವ ದೇಸಾಯಿ, ಮಗನಲಾಲ್ ಕಡೆ ತಿರುಗಿ ಕಾರ್ಯಕ್ರಮ ರೂಪಿಸಲು ಸೂಚಿಸಿದರು.

ಆಗ ಮಹದೇವ ದೇಸಾಯಿ, 'ಮಗನ್‌ಲಾಲ್ ಹೇಗಿದ್ರೂ ಆಶ್ರಮದ ಉಸ್ತುವಾರಿ ನೋಡ್ಕೊತಾರೆ. ನಾನು ಚಳವಳಿ, ಸಂಘಟನೆ ಕಡೆ ಗಮನ ಕೊಡ್ತೇನೆ' ಎಂದು ಹೇಳಿದ್ದಲ್ಲದೆ ಅಲ್ಲಿ ನೆರೆದಿದ್ದವರಿಗೆ ಘೋಷಣೆ ಕೂಗಲು ಪ್ರೇರೇಪಿಸಿದರು.

ವಿದೇಶಿ ಬಟ್ಟೆ
ಬೇಡ ಬೇಡ
ಸ್ವದೇಶಿ ಬಟ್ಟೆ
ಬೇಕು ಬೇಕು

ಹೀಗೆ ಘೋಷಣೆ ಮೊಳಗುತ್ತಿರುವಾಗ, ಕಸ್ತೂರ್‌ಬಾ ಮುಖದಲ್ಲಿ ಏನೋ ಯೋಚನೆಯ ಭಾವ ಮೂಡಿತು. ಯಾರಿಗೂ ಹೇಳದೆ ಅಲ್ಲಿಂದ ಹೊರಟರು. ದೇವದಾಸ್‌ಗೆ ಅಚ್ಚರಿ, ಕುತೂಹಲ. ತಾನೂ ಹಿಂದೆ ಹೋದ. ಕಸ್ತೂರ್‌ಬಾ ತನ್ನ ಕೋಣೆಗೆ ಹೋದರು. ಹಳೆಯ ಟ್ರಂಕ್‌ನಿಂದ ಕೆಲವು ಸೀರೆಗಳನ್ನು ತೆಗೆದುಕೊಂಡರು. ಒಮ್ಮೆ ಅವುಗಳತ್ತ ನೋಡಿದರು. ದೇವದಾಸ್‌ಗೆ ಏನೆಂದು ಗೊತ್ತಾಗಲಿಲ್ಲ. 'ಯಾಕಮ್ಮ ಸೀರೆ ಎಲ್ಲಾ ತಗಂಡೆ' ಎಂದು ಕೇಳಿದ. ಆಗ ಕಸ್ತೂರ್‌ಬಾ ಹೇಳಿದರು:

'ನೋಡು ದೇವದಾಸ್, ಇವು ವಿದೇಶಿ ಸೀರೆ. ದಕ್ಷಿಣ ಆಫ್ರಿಕಾದಲ್ಲಿ ಕೊಡ್ಸಿದ್ರು ನಿಮ್ಮಪ್ಪ. ನೀನು ಸೀಮೆಎಣ್ಣೆ, ಬೆಂಕಿಪಟ್ಣ ತಗೋ. ಆಶ್ರಮದಿಂದ್ಲೇ ಆರಂಭವಾಗ್ಲಿ ಚಳವಳಿ.'

ಕಸ್ತೂರ್‌ಬಾ ಅಲ್ಲಿಂದ ನಿರ್ಧಾರಕ ನಡಿಗೆಯಲ್ಲಿ ಹೊರಟರು. ಅವರನ್ನು ದೇವದಾಸ ಹಿಂಬಾಲಿಸಿದ. ಎಲ್ಲರೂ ಇದ್ದ ಜಾಗಕ್ಕೆ ಬಂದಾಗ ಇನ್ನೂ ಘೋಷಣೆಗಳು